# ತಮಿಳು ಅಜ್ಜನ ಕ್ರಾಂತಿ

**ಬಿ. ಪ್ರಭಾಕರ ಶಿಶಿಲ**

ಕಲೆ: ಆದಿತ್ಯ ಸದಾಶಿವ್

"ನೀವು ತಮಿಳು ಅಜ್ಜನ ಮನೆಗೆ ಹೋದರೆ ಸಾಗಬೇಕಾದ ದಾರಿ ಸ್ಪಷ್ಟವಾಗುತ್ತದೆ." ಡಿ.ಎಫ್.ಓ. ಕಾಗದ ಪತ್ರಗಳನ್ನು ನನಗಿತ್ತು ಹೇಳಿದರು. ಅವರು ನನಗೊಂದು ರಿಸರ್ಚ್ ಪ್ರಾಜೆಕ್ಟು ಸ್ಯಾಂಕ್ಷನ್ ಮಾಡಿದ್ದರು.

ಆ ರಿಸರ್ಚ್ ಪ್ರಾಜೆಕ್ಟ್‌ನ ಹೆಸರು: 'ಶ್ರೀಲಂಕನ್ ತಮಿಳರ ಆರ್ಥಿಕ ಸ್ಥಿತಿಗತಿ.'

"ಈ ತಮಿಳು ಅಜ್ಜ ಯಾರು?"

ಡಿ.ಎಫ್.ಓ. ನೆಗಾಡಿದರು. "ನಾನು ನಕ್ಕಿದ್ದು ನಿಮ್ಮ ಪ್ರಶ್ನೆಗಲ್ಲ. ಅಜ್ಜನಿಗೀಗ ಎಂಬತ್ತೈದು. ನಮ್ಮ ಪ್ಲಾಂಟೇಶನ್ನಿನಲ್ಲಿರುವವರಲ್ಲಿ ಅತ್ಯಂತ ಹಿರಿಯ. ಈ ಪ್ಲಾಂಟೇಶನ್ ನಿರ್ಮಾಣ ಮಾಡಿದವರಲ್ಲಿ ಬದುಕಿರುವವರು ಅವರೊಬ್ಬರೇ. ಹೆಂಡತಿ ಮಕ್ಕಳಿಲ್ಲ. ಮನೆ ಮಠವಿಲ್ಲ. ಆಧಾರ್, ರೇಶನ್ ಕಾರ್ಡ್ ಯಾವುದೂ ಇಲ್ಲ. ಓಟರ್ ಲಿಸ್ಟಲ್ಲಿ ಹೆಸರಿಲ್ಲ. ಆದರೆ, ಅವರ ಹೆಸರೇನು ಗೊತ್ತೇ? ಇಳೆಯರಸನ್!"

ಡಿ.ಎಫ್.ಓ. ಈ ಬಾರಿ ಗಹಗಹಿಸಿ ನಕ್ಕರು.

"ಸರಿ. ನನಗೆ ಅಜ್ಜನ ಪರಿಚಯ ಮಾಡಿಸಿಬಿಡಿ."

ಅಜ್ಜ ಕ್ವಾಟರ್ಸ್ ಒಂದರ ಕೋಣೆಯಲ್ಲಿದ್ದರು. ಅದೇ ಅವರ ಬೆಡ್‌ರೂಮು, ಕಿಚನ್ ಮತ್ತು ದಿವಾನಾ. ಅವರು ಐದೂಕಾಲಡಿ ಎತ್ತರವಿರಬಹುದು. ಹಲ್ಲು, ಹೋಗಿಲ್ಲ. ತಲೆ ತುಂಬಾ ಬೆಳ್ಳಿ ಕೂದಲು. ಡಿ.ಎಫ್.ಓ. ಅಜ್ಜನಲ್ಲಿ ತಮಿಳಲ್ಲೇ ಮಾತಾಡಿದರು.

"ಇನ್ನು ಅಜ್ಜನಲ್ಲಿ ನೀವೇ ಮಾತಾಡಿ. ಅಜ್ಜನ ತಮಿಳು ಮಿಶ್ರಿತ ಕನ್ನಡ ಕೇಳೋದೇ ಒಂದು ಖುಷಿ."

ಡಿ.ಎಫ್.ಓ. ನನ್ನ ಕೈ ಕುಲುಕಿ ಜೀಪೇರಿ ಹೋದರು.

ಅಜ್ಜ ನನಗೊಂದು ಕುರ್ಚಿ ನೀಡಿ, ತಾನು ನಿಂತುಕೊಂಡರು.

"ಅಜ್ಜಾ ನೀವು ನನಗೆ ಲಂಕಾದ ತಮಿಳರ ಪೂರ್ತಿ ವಿವರ ಕೊಡಬೇಕು."

"ನೀವು ರಿಸರ್ಚ್ ಮಾಡೋರಿಗೆ ಬೇಕಾದ್ದು ಅಂಕಿ ಅಂಶ. ಕತೆ ಯಾಕೆ ಸ್ವಾಮಿ? ಕತೆ ಬರೀತೀರಾ?"

"ಅದು ನೀವು ಏನನ್ನು ಹೇಳುತ್ತೀರಿ ಎನ್ನುವುದನ್ನು ಅವಲಂಬಿಸಿದೆ. ನಿಮ್ಮ ಎಳವೆಯಿಂದಲೇ ಆರಂಭಿಸಿ."

ಈಗ ಅಜ್ಜನಲ್ಲಿ ಹೊಸ ಉತ್ಸಾಹ ಉಕ್ಕಿತು. ಕಣ್ಣುಗಳು ಮಿಂಚಿದವು. ನನ್ನೆದುರು ಒಂದು ಕುರ್ಚಿ ತಂದು ಹಾಕಿ ಅದರಲ್ಲಿ ಕೂತುಕೊಂಡರು.

"ಸ್ವಾಮೀ, ನನ್ನ ಎಳವೆಯದ್ದು, ಸಂಕಷ್ಟದ ಕತೆ. ಅದೆಲ್ಲಾ ಹೇಳಿ ಪ್ರಯೋಜನವೇನಿಲ್ಲ. ಶ್ರೀಲಂಕಾದ ಕತೆ ಹೇಳುತ್ತೇನೆ. ಕತೆನಾದ್ರ ಬರ್ಕೊಳ್ಳಿ, ಕಾದಂಬರೀನಾದ್ರೂ ಮಾಡಿ."

ಅಜ್ಜ ಹೇಳ ತೊಡಗಿದರು.

"ಎಷ್ಟೋ ಸಾವಿರ ವರ್ಷಗಳ ಹಿಂದಿನ ಕತೆ ಇದು. ಆಗ ಶ್ರೀಲಂಕಾದಲ್ಲಿದ್ದದ್ದು ಸ್ತ್ರೀಯರ ಸಾಮ್ರಾಜ್ಯ.